ಎಂ ವಿ ಸಿ ನಂ.1881/2023

ಪಿ ಡಬ್ಲು -1

ದಿನಾಂಕಃ 27-05-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ- ಎದುರುದಾರರ ಪರ ಶ್ರೀಮತಿ. ವಾಯ್ ವಿ ಡಿ ವಕೀಲರಿಂದ**

ನನ್ನ ಗಂಡ ಬಳ್ಳಾರಿಯ ಜಿಂದಾಲ್ ಕಾರ್ಖಾನೆಯಲ್ಲಿ ಮೆಕ್ಯಾನಿಕ್ ಅಂತಾ ಕೆಲಸ ಮಾಡುತ್ತಿದ್ದನು. ಅವರು ಯಾವ ವರ್ಷದಲ್ಲಿ ಕೆಲಸಕ್ಕೆ ನಿಯುಕ್ತಿ ಹೊಂದಿದ್ದರು ಎಂದು ಹೇಳಲು ಬರುವುದಿಲ್ಲ. ನನ್ನ ಗಂಡ ಐಟಿಐ ಪದವಿಧರರು ಆಗಿದ್ದರು. ನನ್ನ ಗಂಡ ಸದರಿ ಕಾರ್ಖಾನೆಯಲ್ಲಿ ಕೆಲಸಕ್ಕೆ ನಿಯುಕ್ತಿ ಆದ ಬಗ್ಗೆ ದಿನಾಂಕದ ಕಾಗದ ಪತ್ರ ಹಾಜರುಪಡಿಸಿಲ್ಲ. ಅವರು ಕೆಲಸಕ್ಕೆ ಹಾಜರಾದ ದಿನಾಂಕದಿಂದ ಇಲ್ಲಿಯವರೆಗೂ ಪಡೆದುಕೊಂಡ ಸಂಬಳದ ವರದಿಯನ್ನು ಹಾಜರುಪಡಿಸಿಲ್ಲ. ಅವರು ಕೆಲಸಕ್ಕೆ ಹಾಜರಾದ ದಿನಾಂಕದಂದು ಏನು ಸಂಬಳ ಪಡೆಯುತ್ತಿದ್ದರು ಎಂದು ತೋರಿಸಲು ಯಾವುದೇ ಕಾಗದ ಪತ್ರ ಹಾಜರುಪಡಿಸಿಲ್ಲ. ಹಾಗೇ ಕೆಲಸಕ್ಕೆ ಹಾಜರಾದ ಬಗ್ಗೆ ಕಾರ್ಖಾನೆಯವರೊಂದಿಗೆ ಮಾಡಿಕೊಂಡ ಕರಾರಿನ ಪ್ರತಿಯನ್ನು ಹಾಜರುಪಡಿಸಿಲ್ಲ. ನನ್ನ ಗಂಡ ಅಪಘಾತದಲ್ಲಿ ತೀರಿಕೊಂಡ ಬಗ್ಗೆ ಸದರಿ ಕಾರ್ಖಾನೆಗೆ ಲಿಖಿತ ರೂಪದಲ್ಲಿ ಮಾಹಿತಿ ನೀಡಿಲ್ಲ. ಹಾಗೇ ಲಿಖಿತ ರೂಪದಲ್ಲಿ ವರದಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಹಾಗೇ ಕಾರ್ಖಾನೆಯವರು ನನ್ನ ಗಂಡ ತೀರಿಕೊಂಡ ನಂತರ ಪರಿಹಾರವಾಗಿ ರೂ.10 ಲಕ್ಷಗಳನ್ನು ಕೊಟ್ಟಿರುತ್ತಾರೆ. ಹಾಗೇ ಕಾರ್ಖಾನೆಯವರು ಹಣ ನೀಡಿದ ಬಗ್ಗೆ ಕಾಗದ ಪತ್ರ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನಿಪಿ-11 ರಲ್ಲಿ ನನ್ನ ಗಂಡ ಕಂಪನಿಯಿಂದ ಸಂಬಳ ಪಡೆದುಕೊಂಡ ಬಗ್ಗೆ ಯಾವುದೇ ನೋಂದಣಿ ಮಾಡಲಾಗಿಲ್ಲ ಎಂದರೆ ಸರಿಯಲ್ಲ. ನಿಪಿ-11 ನನ್ನ ಗಂಡ ಕಾರ್ಖಾನೆಯಿಂದ ಸಂಬಳ ಪಡೆದುಕೊಂಡ ಬಗ್ಗೆ ಅಲ್ಲ ಎಂದರೆ ಸರಿಯಲ್ಲ. ನಿಪಿ-11 ಕಾರ್ಖಾನೆಯಿಂದ ಸಂಬಳ ಪಡೆದುಕೊಳ್ಳುವ ಬಗ್ಗೆ ಇರುವ ದಾಖಲೆ ಅಲ್ಲ ಎಂದರೆ ಸರಿಯಲ್ಲ. ನಾನು ನನ್ನ ಗಂಡ ಸಂಬಳ ಪಡೆದುಕೊಳ್ಳುತ್ತಿದ್ದ ಬಗ್ಗೆ ವೇತನ ಪ್ರಮಾಣ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ. ಹಾಗೇ ವೇತನ ಪ್ರಮಾಣ ಪತ್ರ ಹಾಜರುಪಡಿಸಿ ಸಂಬಂಧಿಸಿದ ಅಧಿಕಾರಿಯ ಸಾಕ್ಷ್ಯ ಮಾಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನನ್ನ ಗಂಡ ಸದರಿ

ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ–11 ದಾಖಲೆಯನ್ನು ಖೊಟ್ಟಿಯಾಗಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ ನನ್ನ ಗಂಡನ ಕೆಲಸದ ಕಾರ್ಖಾನೆಗೂ ನಿಪಿ–11 ಕ್ಕೂ ಏನು ಸಂಬಂಧ ಹೊಂದಿಲ್ಲ ಎಂದರೆ ಸರಿಯಲ್ಲ. ನಿಪಿ–11 ರಲ್ಲಿ ಒಂದು ತಿಂಗಳ ಸಂಬಳದ ವಿವರಣೆ ಹೊರತುಪಡಿಸಿ ಅದರ ಹಿಂದಿನ ಇಲ್ಲವೇ ಮುಂದಿನ ತಿಂಗಳ ಸಂಬಳ ಜಮೆಯಾದ ಬಗ್ಗೆ ವಿವರಣೆ ಇಲ್ಲ ಎಂದರೆ ಸರಿ. ನನ್ನ ಗಂಡ ಸದರಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ವಿವರಣೆ ಕೇಳಲಾಗಿ ಅವರು ಅದಕ್ಕೆ ಉತ್ತರದ ಪ್ರತಿ ನೀಡುತ್ತಾರೆ ಎಂದರೆ ಸರಿ. ಅದನ್ನು ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ಆ ರೀತಿ ಕಂಪನಿಯಿಂದ ಯಾವುದೇ ಪ್ರತ್ಯುತ್ತರ ನನಗೆ ಬಂದಿಲ್ಲ. ನನ್ನ ಗಂಡನ ಆದಾಯದ ಕುರಿತು ನಿಪಿ–11 ದಾಖಲೆ ಸಮಂಜಸವಾದ ದಾಖಲೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಕಂಪನಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಮತ್ತು ಅವರು ನಾನು ಹೇಳುವಂತೆ ಯಾವುದೇ ಸಂಬಳ ಪಡೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ–11ನ್ನು ಖೊಟ್ಟಿಯಾಗಿ ಹಾಜರುಪಡಿಸಿ ಈಗ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಸದರಿ ಸಾಕ್ಷಿದಾರರ ಸಾಕ್ಷ್ಯವನ್ನು ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.